ಸರಿ ಬರಲಿಲ್ಲ, 'ನಾಳೆ ನಾವು ಬ್ಯಾಂಕಿನಿಂದ ಹಣ ತೆಗೆದರೆ ಪೊಲೀಸರಿಗೆ ಗೊತ್ತಾಗೋದಿಲ್ವ. ನಮ್ಮನ್ನ ಸಲೀಸಾಗಿ ಹಿಡಿದು ಬಿಡುತ್ತಾರೆ. ಅದೆಲ್ಲ ಬೇಡ, ಅವರವರ ದುಡ್ಡು ಅವರವರ ಹತ್ತಿರ ಇರಲಿ. ಹೈದರಾಬಾದ್ ಸೇರಿದ ಮೇಲೆ ಯೋಚಿಸಿ ಅದಕ್ಕೆ ದಾರಿ ಕಂಡು ಹಿಡಿಯೋಣ' ಎಂದಳು.

ಮೂವರೂ ಚೈತ್ರ ಪೌರ್ಣಮೆಗಾಗಿ ಕಾಯುತ್ತಿದ್ದರು. ಅದಕ್ಕೆ ಇನ್ನೂ ನಾಲಕ್ಕು ದಿನ ಉಳಿದಿತ್ತು. ಎಲ್ಲರಲ್ಲೂ ದುಗುಡ, ಆತಂಕ. ಮಲಗಿದ್ದರೆ ಮಲಗಿ, ಕೂತಿದ್ದರೆ ಕೂತೇ ಇರಬೇಕು ಅನ್ನುವಂತಹ ಆಲಸ್ಯ. ಮಂಜ ಟೀ ಮಾರುವುದನ್ನು ಬಿಟ್ಟುಬಿಟ್ಟಿದ್ದ. ತನ್ನ ಬಳಿ ಇದ್ದ ಸ್ಟೌ, ಗ್ಯಾಸ್ ಮತ್ತೊಬ್ಬ ಹುಡುಗನಿಗೆ ಮಾರಿಬಿಟ್ಟ. ಚಂಪಾಳಿಗೆ ಈಗೀಗ ತಾನು ಹೋದಮೇಲೆ ಅಪ್ಪ ಅಮ್ಮನ ಗತಿ ಏನು, ವನೋತ್ಸವದ ದಿನ ಮನೆಯಲ್ಲಿ ಸೂತಕ ಆದ ಹಾಗೆ ಆಗುತ್ತಲ್ಲ ಅನ್ನುವ ಯೋಚನೆ. ಅಮ್ಮ ಏನೇನು ಶಾಪ ಹಾಕುತ್ತಾಳೋ, ಅಪ್ಪ ಎಷ್ಟು ಸಂಕಟ ಪಡುತ್ತಾನೋ, ಅಪ್ಪ ಅಮ್ಮನನ್ನ ನುಜ್ಜು ಗುಜ್ಜಾಗುವಂತೆ ಹೊಡೆಯುತ್ತಾನೆ ಎಂದು ಯೋಚನೆ ಬಂದಾಗಲೆಲ್ಲ ದುಃಖ ಉಮ್ಮಳಿಸಿ ಬರುತ್ತಿತ್ತು. ಪೊಲೀಸರು ನಮ್ಮನ್ನ ಹಿಡಿದು ಬಿಟ್ಟರೆ, ಎಷ್ಟು ಅವಮಾನ... ಬಾಲ ಮೋಸ ಮಾಡಿಬಿಟ್ಟರೆ ಅಥವಾ ಬಿಟ್ಟು ಹೋಗಿಬಿಟ್ಟರೆ, ಮಂಜನನ್ನ ನಂಬಬಹುದಾ, ಅವನ ಸ್ನೇಹಿತನನ್ನ ನಂಬಬಹುದಾ... ಬರೀ ಇಂತಹ ಅನುಮಾನಗಳೆ. ದೀಪೋತ್ಸವದಲ್ಲಿ ನೇರವಾಗಿ ಬಾಲನನ್ನ ಕೇಳಿಬಿಟ್ಟಳು, 'ನನಗ್ಯಾಕೋ ಭಯ ಆಗ್ತಿದೆ, ಸ್ವರ್ಗಾರೋಹಣಕ್ಕೆ ಹೋಗುವಾಗ ದ್ರೌಪದಿಯನ್ನ ಹಿಂದೆ ಬಿಟ್ಟು ಹೋದಂತೆ ನೀನು ನನ್ನ ಬಿಟ್ಟು ಹೋಗಲ್ಲ ತಾನೆ' ಎನ್ನುತ್ತ ಅಳತೊಡಗಿದಳು. ಅವನು ತನಗೆ ತಿಳಿದಿದ್ದನ್ನು ಹೇಳಿ ಸಮಾಧಾನ ಪಡಿಸಿದ. ಅಸಲಿಗೆ ಅವನೇ ದಿಗಿಲುಗೊಂಡಿದ್ದ. ಮೂವರಲ್ಲಿ ಮಂಜನೊಬ್ಬನೇ ಧೈರ್ಯವಾಗಿದ್ದುದು. ಅವನಿಗೆ ಏನನ್ನೂ ಕಳೆದುಕೊಳ್ಳುವ ಭಯವಿಲ್ಲ, ಯಾರನ್ನೂ ತೊರೆದು ಹೋಗುವ ನೋವಿಲ್ಲ.

ಮಾರನೆಯ ದಿನ ಮೂವರೂ ಮಂಜನ ರೂಮಿನಲ್ಲಿ ಭೆಟ್ಟಿಯಾದರು. ಚಂಪಾಳಿಗೆ ಹಣ ಭದ್ರವಾಗಿ ಇಟ್ಟುಕೋ ಎಂದು ಹೇಳಿ ಎಲ್ಲರ ಟಿಕೆಟ್ ತನ್ನ ಬಳಿಯೇ ಇರಿಸಿಕೊಂಡ ಬಾಲ. ಎಲ್ಲರೂ ರೈಲ್ವೆ ಸ್ಟೇಷನ್ ಪಕ್ಕ ಇರುವ ಹೋಟೆಲಿನಲ್ಲಿ ಸೇರುವುದು, ಅಲ್ಲಿಂದ ಒಟ್ಟಿಗೆ ಹೋಗುವುದು ಎಂದು ನಿರ್ಧಾರಿಸಿದರು.

ಪೌರ್ಣಮೆಯ ದಿನ ಬೆಳಗ್ಗೆ ಎದ್ದಾಗ ಚಂಪಾಳ ಅಮ್ಮ ಒಂದು ಮೂಲೆಯಲ್ಲಿ ಆಯಾಸದಿಂದ ಮಲಗಿದ್ದಳು. ಆಕೆ ಎಂದಿಗಿಂತ ಹೆಚ್ಚು ಮುದ್ದಾಗಿ ಕಾಣಿಸುತ್ತಿದ್ದಳು. ಮೆಲ್ಲಗೆ ಅಮ್ಮನ ಬಳಿ ಹೋಗಿ ಅವಳ ಕೆನ್ನೆಗೆ ಮುತ್ತಿಟ್ಟಳು. ಅಪ್ಪ ಮಂಚದಲ್ಲಿ ಮಲಗಿದ್ದ. ವಿಚಿತ್ರವೆಂದರೆ ಈ ಹತ್ತು ದಿನ, ಬೇರೆ ದಿನಗಳಲ್ಲಿ ಅಪ್ಪನ ಬಳಿ ಬರುತ್ತಿದ್ದ ಹಳಸಲು ವಾಸನೆ ಬರುತ್ತಿರಲಿಲ್ಲ. ಅಜ್ಜಿ ಟೀ ಮಾಡುತ್ತಿದ್ದಳು. ಇವಳು ಎದ್ದಿದ್ದು ನೋಡಿ, 'ಮುಖ ತೊಳೆದು ಬಾ, ಟೀ ಕಾಯಿಸಿದ್ದೀನಿ' ಎಂದಳು. ಒಂದೆಡೆ ಬಿಡುಗಡೆಯ ಪುಳಕ, ಮತ್ತೊಂದೆಡೆ ಕಡಿದುಕೊಳ್ಳುವ ಯಾತನೆ. ಬಾಲನನ್ನು ನೆನಪಿಸಿಕೊಂಡಳು. ಇವೆಲ್ಲವನ್ನೂ ಮೀರಿದ ಬದುಕು ಅವನೊಂದಿಗೆ ಸಿಗುವುದೇ ಎಂದು ಯೋಚಿಸಿದಳು. ಮೆಲ್ಲನೆದ್ದು ಹಣ, ಬಟ್ಟೆ, ಬ್ಯಾಗಿನಲ್ಲಿ ಸುರಕ್ಷಿತವಾಗಿದೆಯಾ ಎಂದು ನೋಡಿಕೊಂಡಳು. ಅಮ್ಮನನ್ನು ನೋಡಿದಾಗ ಸಂಕಟವಾಗುತ್ತಿತ್ತು. ಅಜ್ಜಿ ಮಾಡಿದ ಟೀ ಯಾಕೋ ಕಹಿಯಾಗಿತ್ತು. ಸಕ್ಕರೆ ಹಾಕುವುದಕ್ಕೆ ಮರೆತಿರಬೇಕು ಎಂದು ಯೋಚಿಸುತ್ತ ಮತ್ತೆ ಮಲಗಿದಳು. ಮಧ್ಯಾಹ್ನ ಎದ್ದಾಗ ಬಿಸಿಲೇರಿತ್ತು. ತಮ್ಮನನ್ನು ಬಿಟ್ಟು ಮನೆಯಲ್ಲಿ ಯಾರೂ ಇರಲಿಲ್ಲ. ಅವನು ಹೆಡ್‌ಸೆಟ್ ಹಾಕಿಕೊಂಡು ಮೊಬೈಲ್ ನೋಡುತ್ತಾ ದಪ್ಪ ದನಿಯಲ್ಲಿ ಐಟಂ ಸಾಂಗ್ ಹಾಡುತ್ತಿದ್ದ. ಹಾಸಿಗೆಯ ಮೇಲಿಂದಲೇ ಬಾಲನ ಮೇಘ ಸಂದೇಶ ಬಂದಿದೆಯಾ ಎಂದು ನೋಡಿದಳು. ಸ್ನಾನ ಮಾಡಿ, ತನ್ನ ಬ್ಯಾಗ್ ಜೋಪಾನವಾಗಿ ಇದೆಯಾ ಎಂಬುದನ್ನು ಖಾತ್ರಿ ಮಾಡಿಕೊಂಡಳು. ಅಪ್ಪ ಕೊಡಿಸಿದ್ದ ಹೊಸ ಚೂಡಿ ತೊಟ್ಟು, ತಮ್ಮನ ಜೊತೆ ತಿಗಳರಪೇಟೆಗೆ ಹೋದಳು. ಅಮ್ಮ ಇತರ ಹೆಂಗಸರ ಜೊತೆ ಹಬ್ಬದ ಹರುಷದಲ್ಲಿ